No. M. 1299 SATYAVADI, Founded 1917

603

ಸತ್ಯವಾದಿ

(ಧರ್ಮಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರಕಟಿಸಲ್ಪಟ್ಟದ್ದು)

ಸಂಪುಟ 30 ಸಂಚಿಕೆ 152] ಬುಧವಾರ 12—2—47 [ಬೆಲೆ ಪ್ರತಿ 3 ಪೈ

ಜಪಾನಿನಲ್ಲಿ ಆಟಂ ಪರಿಶೋಧನಾ ಪ್ರತಿಬಂಧ

ವಾಷಿಂಗ್ಟನ್ ಫೆ 10— 11 ಜನಾಂಗಗಳ ದೂರಪ್ರಾಚ್ಯ ಕಮಿಷನ್ನಿನವರು ಜಪಾನಿನಲ್ಲಿ ಅಟಂ ಉಪಯೋಗ ಮತ್ತು ಪರಿಶೋಧನೆಯನ್ನು ಪ್ರತಿಬಂಧಿಸಿದ್ದಾರೆ.

ಕೋಮುವಾರು ಬಹಿಷ್ಕಾರ ತಪ್ಪು

ನಂದೀಗ್ರಾಮ ಫೆ 10— ಒಂದು ಕೋಮಿನವರು ಮತ್ತೊಂದು ಕೋಮಿನವರನ್ನು ಬಹಿಷ್ಕರಿಸುವುದು ತಪ್ಪೆಂದೂ ಇದರಿಂದ ಇಬ್ಬರಿಗೂ ಒಳ್ಳೆಯದಲ್ಲವೆಂದೂ ಮಹಾತ್ಮಾ ಗಾಂಧಿಯವರು ಹೇಳಿರುವರು.

ಪ್ರ॥ ಶಿ॥ ಮಾಧವರಾಯರಿಗೆ ಹೊಸ ಹುದ್ದೆ

ಸೆರೈಕೆಲಾ ಫೆ 10— ಮೈಸೂರು ಸಂಸ್ಥಾನದ ಮಾಜಿ ದಿವಾನರಾದ ಪ್ರಧಾನ ಶಿರೋಮಣಿ ಮಾಧವರಾಯರೂ ಮತ್ತು ಕೇಂದ್ರ ಸಭಾ ಸದಸ್ಯರಾದ ಶ್ರೀ ಕೆ. ಸಿ. ನಿಯೋಗಿಯವರೂ, ಪಶ್ಚಿಮ ಸಂಸ್ಥಾನಗಳ ಪೆಡರೇಷನ್ ಸ್ಥಾಪನೆಗೆ ಸಲಹೆಗಾರರಾಗಿರಲು ಒಪ್ಪಿದ್ದಾರೆ.

೯೦ ಲಕ್ಷ ರೂ.

ನವದೆಹಲಿ ಫೆ 10— ರಾಷ್ಟ್ರೀಯ ರಸಾಯನಾ ಮತ್ತು ಕೈಗಾರಿಕೆ ಪರಿಶೋಧನಾ ಸಂಸ್ಥೆಗಳ ಸ್ಥಾಪನೆಗಾಗಿ 90 ಲಕ್ಷ ರೂ. ಗಳನ್ನು ವ್ಯಯಮಾಡಲು ಈ ಸಂಬಂಧದ ಸಮಿತಿಯವರು ನಿರ್ಧರಿಸಿರುವರು.

ಜಪಾನಿನಿಂದ ಬ್ರಿಟಿಷ್ ಸೈನ್ಯ ವಾಪಸ್ಸು

ಟೋಕಿಯೋ ಫೆ 10— ಜಪಾನಿನಲ್ಲಿರುವ ಬ್ರಿಟಿಷ್ ಸೈನ್ಯದಲ್ಲಿ ಮೊದಲನೇ ತಂಡವು ಈ ತಿಂಗಳು 18 ಕ್ಕೆ ಅಲ್ಲಿಂದ ವಾಪಸ್ಸಾಗುವುದು.

ಟನ್ನಿಗೆ ಬ್ರಿಕಲ್ಲಿಗೆ ಜಜ್ಜಲು

ವಾಷಿಂಗ್ಟನ್ ಫೆ 10— ಬ್ರಿಟನ್ನು ತನ್ನ ಹಡಗುಗಳಿಗೆ ಅಮೇರಿಕಾ ಕಲ್ಲಿ ಜಜ್ಜಲನ್ನು ಕೊಳ್ಳಬಹುದೆಂದು ಹೇಳಲಾಗಿದೆ.

ಕಮ್ಯೂನಿಸ್ಟ್ ನಿರ್ಣಯ ತಿರಸ್ಕಾರ

ಮದರಾಸು ಫೆ 11— ಮದರಾಸು ಶಾಸನ ಸಭೆಯ ಕಮ್ಯುನಿಸ್ಟ್ ಸದಸ್ಯರಾದ ಶ್ರೀ ವೆಂಕಟೇಶ್ವರಲು ಅವರು ಮಂಡಿಸಿದ್ದ, ಸಾರ್ವಜನಿಕ ರಕ್ಷಣಾ ಕಾಯಿದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂಬ ನಿರ್ಣಯವನ್ನು ಪ್ರಧಾನಿ ಪ್ರಕಾಶಂ ತಿರಸ್ಕರಿಸಿದರು.

೧೯೭೦ ಮಿಲಿಯ ರೂ. ಪರಿಹಾರ

ಕೊಲಂಬೋ ಫೆ 7 — 1939 ರಿಂದ 1945 ರವರೆಗೆ ತಾವು ಕೊಂಡ ಸರಕುಗಳ ಸಂಬಂಧದಲ್ಲಿ ಹೆಚ್ಚು ಬೆಲೆ ಬಿದ್ದಿರುವುದಕ್ಕಾಗಿ ತಮಗೆ ೧೯೭೦ ಮಿಲಿಯ ರೂ. ಪರಿಹಾರ ಕೊಡಬೇಕೆಂದು ಸಿಲೋನ್ ಸರಕಾರವು ಬ್ರಿಟಿಷ್ ಸರಕಾರವನ್ನು ಕೇಳಿದೆ.

ಎಂಥಾ ಗಂಡ ಬೇಕು

ಜರ್ಮನಿಯ ಅಮೇರಿಕಾ ಆಕ್ರಮಿತ ಪ್ರದೇಶದಲ್ಲಿ ಪರೀಕ್ಷಿಸಲಾಗಿ ಶೇ 68 ಮಂದಿ ಸ್ತ್ರೀಯರು ಅಹಾರಧದ ವ್ಯಾಪಾರಿಗಳನ್ನು ವರಿಸಲು ಪಡುತ್ತಾರೆ. ಕಟುಕರು ರೊಟ್ಟಿ ಡಿಯುವರು ಕಿರಾಣಿ ವ್ಯಾಪಾರಿಗಳನ್ನು ಹೋಟಲಿನವರುಗಳನ್ನವರಿಸಲು ತವಕ ಪಡುತ್ತಾರೆ.

ಎಂಥಾ ನಿರ್ಬಂಧ

ಅಹಮದಾಬಾದಿನ ಪ್ರೇಮಚಂದ್ ಟ್ರೈನಿಂಗು ಕಾಲೇಜಿನ ಸನಾತನ ಧರ್ಮ ವಿದ್ಯಾರ್ಥಿಗಳು ತಮ್ಮ ಊಟದ ಮಂದಿರದಲ್ಲಿ ಹರಿಜನರನ್ನು ಸೇರಿಸದಿರಲು ಅವರೆಲ್ಲಾ ಹಾಸ್ಟೆಲ್ ಬಿಡಬೇಕೆಂದು ಅಧಿಕಾರಿಗಳು ಆಜ್ಞೆ ಮಾಡಿದ್ದಾರೆ

ಶ್ವೇತ ಮಹಿಮೆ ತಗ್ಗಕೂಡದು

ಲಂಡನ್ ಫೆ 10 — ದಕ್ಷಿಣ ರೊಡೇಷಿಯಾದಲ್ಲಿ ಶ್ವೇತ ಮಹಿಮೆ ತಗ್ಗಲೇ ಕೂಡದು. ಅಲ್ಲಿ ಆಫ್ರಿಕಯವರಿಗೆ ಇರುವ ಪ್ರತಿಬಂಧಕಗಳನ್ನು ಇನ್ನು ಇಪ್ಪತ್ತು ವರ್ಷಗಳವರೆಗಾದರೂ ತೆಗೆಯುವುದಿಲ್ಲ. ಅಲ್ಲಿಯ ಪ್ರಧಾನಿ ಪ್ರಕಟಣೆ ಇದು.

ರಚನಾ ಸಮಿತಿಗೆ ಸಂಸ್ಥಾನ ಪ್ರತಿನಿಧಿಗಳು

ನವದೆಹಲಿ ಫೆ 10 — ರಾಜ್ಯಾಂಗ ರಚನಾ ಸಭೆಯ ಸಂಧಾನ ಸಮಿತಿಯ ಸದಸ್ಯ ಡಾ॥ ಪಟ್ಟಾಭಿಸೀತಾರಾಮಯ್ಯನವರೇಂದ್ರ ಸಂಧಾನ ಸಮಿತಿಯೊಡನೆ ಇನ್ನೂ ಯಾವ ರಾಜಕೀಯ ಚರ್ಚೆಯೂ ಜರುಗಿಲ್ಲ ಎಂದಿದ್ದಾರೆ.

ಆಯುರ್ವೇದಿಕ್ ಮತ್ತು ಯುನಾನಿ ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ಆಯುರ್ವೇದಿಕ್ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಕುಂದುಕೊರತೆಗಳನ್ನು ಕಾರ್ಯಕರ್ತರುಗಳಿಗೆ ಆರು ತಿಂಗಳ ಮುಂಚೆಯೇ ತಿಳಿಸಿದ್ದರೂ ಅವರು ಯಾವ ಕಾರ್ಯ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಕಾಲೇಜಿನ ಸ್ಥಿತಿಯು ಕೆಟ್ಟದಾಗಿ ಕೆಡುತ್ತಿದೆ ಆದ್ದರಿಂದ ಇಂದಿನಿಂದ ಮುಷ್ಕರ ಹೂಡಿದ್ದೇವೆ. ನಮ್ಮ ಬೇಡಿಕೆಗಳು ಪೂರ್ಣವಾಗುವವರೆಗೂ ನಾವು ಕಾಲೇಜಿಗೆ ಹಿಂದಿರುಗುವುದಿಲ್ಲವೆಂದು ತೀರ್ಮಾನಿಸಿದ್ದಾರೆ.

ಬ್ರಿಟಿಷ್ ಸಲಹೆ ನಿರಾಕರಿಸಲ್ಪಟ್ಟಿತು

ಲಂಡನ್ ಫೆ 10 — ಪ್ಯಾಲೆಸ್ಟೈನ್ ಸಂಧಾನದ ಬಗ್ಗೆ ಬ್ರಿಟಿಷರು ಮುಂದಿಟ್ಟ ಸಲಹೆಗಳನ್ನು ಅರಬ್ ಮತ್ತು ಯಹೂದ್ಯರು ನಿರಾಕರಿಸಿದ್ದಾರೆ.

ಸುಹ್ರವರ್ದಿ ಮಂತ್ರಿಮಂಡಲ ಖಂಡನೆ

ನವದೆಹಲಿ ಫೆ 10— ಬೀಹಾರು ಮುಂತಾದ ಪ್ರಾಂತ್ಯಗಳಿಂದ ಬಂಗಾಳಾಕ್ಕೆ ಸುಹ್ರವರ್ದಿ ಮಂತ್ರಿ ಮಂಡಲ ಮುಸ್ಲಿಂರನ್ನು ಕರೆಸುತ್ತಿದೆ, ಇದಕ್ಕಾಗಿ ಅಸಾಧ್ಯ ಧನನಾಶವಾಗುತ್ತಿದೆ ಪಾಕಿಸ್ತಾನ ರಚನೆಗಾಗಿ ಹಣ ವೆಚ್ಚವಾಗುತ್ತಿದೆ " ಎಂದು ಹಿಂದೂ ಮಹಾಸಭೆ ಖಂಡಿಸಿ ನಿರ್ಣಯವನ್ನಂಗೀಕರಿಸಿದೆ.

ಬ್ರಿಟಿಷ್ ಸ್ವಾರ್ಥ ಸಾಧನೆ

ಕಾಂಗ್ರೆಸ್-ಲೀಗ್ ವೈಷಮ್ಯದಲ್ಲಿ ಬ್ರಿಟಿಷರು ಸ್ವಾರ್ಥವನ್ನು ಸಾಧಿಸುತ್ತಿರುವುದಾಗಿ ಲಂಡನ್ ಪತ್ರಿಕೆಗಳು ಪ್ರಕಟಿಸಿವೆ.

ಅಮೇರಿಕಾದ ನಿಯಮಗ

ನ್ಯೂಹೆಂಪ್ಶೈರಿನಲ್ಲಿ ಟಾ ಫಿಕ್ ತ್ರ ವಿದು. ಒಂದು ಚೌಕದಲ್ಲಿ ಬೇರೆ ಬೇರೆ ಕಡೆಯಿಂದ ಎರಡು ವಾಹನಗಳು ಸೇರಿದರೆ ಅವೆರಡೂ ನಿಲ್ಲಿಸಲ್ಪಡಬೇಕು ಅಲ್ಲದೆ ಒಂದು ಹೊರಡದೆ ಇನ್ನೊಂದು ಹೊರಡಕೂಡದು. ಎರಡೂ ಒಟ್ಟಿಗೇ ಹೊರಡಬೇಕು.

ಇರಿಜಿಯಾನದ ಗ್ರೇಟ್ ಎಂಬಲ್ಲಿ ಜನರು ಬೆಳ್ಳಿ ತಿರಿಪೆ ಗಳನ್ನು ಗೇ ಟ್ರಾಮಿನಲ್ಲಿ ಸಂಚಾರಿಸಕೂಡದು.

ಮಿಚಿಗಾನಿನ ಸಾಲ್ಟ್ ಸೇಂಟ್ ಮೇರಿಯಾದಲ್ಲಿ ಗಾಳಿಯು ಎದುರಾಗಿ ಉಗುಳುವುದು ದಂಡಾರ್ಹತೆ !

ಕ್ಯಾಲಿಫೋರ್ನಿಯಾದಲ್ಲಿ ನಿಮಗೆ ಶಿಕಾರಿ ರಹದಾರಿ ಇಲ್ಲದ ಬೋನಿನಲ್ಲಿ ಇಟ್ಟ ಆಯನ್ನು ಹಿಡಿಯಕೂಡದು.

ಮಿಚಿಗಾನಿನಲ್ಲಿ ಹೆಂಡತಿಯ ಉಡುಗೆ ತೊಡಿಗೆಯುಲ್ಲಾ ಗಂಡನಿಗೆ ಸೇರಿದ್ದು ಆವಳು ಇವನನ್ನು ತ್ಯಜಿಸಿದರೆ ಅವೆಲ್ಲವನ್ನು ಆವಳ ವೈ ಮೇಲಿಂದ ಇವನು ತೆಗೆದು ಕೊಳ್ಳಬಹುದು.

ಇಲ್ಲಿ ನಾಯಿಸ್ಸಿನಲ್ಲಿ ಒಬ್ಬ ಹೆಂಗಸು ಒಂದು ಅಂಗಡಿಯಲ್ಲಿ 6 ಕ್ಕಿಂತ ಹೆಚ್ಚು ಉಡುಗೆಯನ್ನು ಧರಿಸಿ ಸೋಡಿದರೆ ವಿಚಾರಣೆಗೆ ಒಳಪಡಿಸಬಹುದು.

ಜರ್ಮನ್ ಖೈದಿಗಳ ಡಿಪೆನ್ಸ್ ಲಾಯರುಗಳು ತಮಗೆ ಹೊಟ್ಟೆ ತುಂಬಾ ಆಹಾರ ಕೊಡದಿದ್ದರೆ ಮುಷ್ಕರ ಮಾಡುವುದಾಗಿ ತಿಳಿಸಿರುವರು. ಅವರಿಗೆ ಈಗ ಕೊಡುತ್ತಿರುವುದು ಸಾಲದಂತೆ !

ಅಮೇರಿಕಾದ ಚಾಟ್ ನೂಗುದಲ್ಲಿ ವಿಲ್ಡ್ರೆಡ್ ಗಿಲ್ಸ್ ಎಂಬಾಕೆಯು ತನ್ನ 16 ನೇ ವಿವಾಹ ವಿಚ್ಛೇದನೆಯನ್ನು ಪಡೆದಳು. ಇನ್ನು 17 ನೇ ಗಂಡನನ್ನು ವರಿಸಬಹುದು.

— —

ರಷ್ಯಾದ ಪ್ರಥಮ ವರ್ತಮಾನ ಪತ್ರಿಕೆಯು ೨೪೪ ವರ್ಷಗಳ ಹಿಂದೆ ಪ್ರಕಟವಾಯಿತು.

ಮಾಸ್ಕೋ ಫೆ 10 — ರಷ್ಯಾ ಮಹಾ ಚುನಾವಣೆ ಮುಗಿಯಿತು. ಶೇ 98 ಮಂದಿ ಓಟು ಕೊಟ್ಟಿದ್ದಾರೆ. ಪ್ರಥಮ ಫಲಿತಾಂಶ ನಾಳೆ.

...ಮಾನ

...ಯು ಪಾಯಧಾಣಿ ಭಾಗದ ...ಳವಿಸಿದ ಜೂರಿ ಇರತದಲ್ಲಿ ಒಳ್ಳೇ ...ರ್ಯ್ಯದಿಂದ ಮತ್ತು ಕರ್ತವ್ಯ ಪ್ರಿಯ ತೆಯಿಂದ ಇರಿಯುವನನ್ನು ಪೋಲೀಸ್ ಕಾನ್‌ಸ್ಟೇಬಲ್ ನಾರಾಯಣ ಬಾಳ ಶಿವೆಡೆ ಎಂಬವನು ಬಂಧಿಸಿದ್ದರಿಂದ ಅವ ನಿಗೆ ನಾಯಕನ ಸ್ಥಾನ ಕೊಟ್ಟು ರೂ. 150 ಬಹುಮಾನ ಕೊಡಲಾಯಿತು.

ಉಪವಾಸ

ಸಂಸ್ಥಾನಾಧಿಕಾರಿಗಳು ಹೊಲ್ತಪುರ ಸರ್ಕಾರಿ ನೌಕರರ ಬೇಡಿಕೆಗಳಿಗೆ ಒಪ್ಪಿಕೊಂಡ ಪ್ರಕಾರ ಅವನ್ನು ಪೂರೈಸದಿದ್ದರೆ ತಾವು ಉಪವಾಸ ಕೈಗೊಳ್ಳುವದಾಗಿ ಪ್ರಜಾ ಪರಿಷತ್ತಿನ ಅಧ್ಯಕ್ಷರಾದ ಮಾಧವ ಬಾಗಲರವರು ಸರ್ಕಾರಕ್ಕೆ ತಿಳಿಸಿದ್ದಾರೆ.

ಮೈಸೂರು ಪೌರಸಭೆ

ಮೈಸೂರು — ಪೌರಸಭೆಯ ವಿಶೇಷ ಅಧಿವೇಶನ ನಾಳೆಯ ದಿವಸ ಮಧ್ಯಾಹ್ನ ನಾಲ್ಕು ಗಂಟೆಗೆ ಸೇರುವುದು.

ಶ್ರೀ ಟಿ. ಮರಿಯಪ್ಪ, ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟಿ ಮತ್ತಿತರ ಹತ್ತು ಮಂದಿ ರುಜು ಮಾಡಿ ಕಳುಹಿಸಿರುವ ವಿಷಯವನ್ನು ಪರಿಶೀಲಿಸಲಾಗುವುದು.

ಮೈಸೂರು ಪೌರಸಭೆಗೆ ಚುನಾಯಿತ ಅಧ್ಯಕ್ಷರು ಇರಬೇಕೆಂದು ಕಳೆದ 37 ನೇ ಸಾಲಿನಿಂದ 46 ನೇ ಸಾಲಿನವರೆಗೆ ನಿರ್ಣಯಗಳು ಅಂಗೀಕಾರವಾಗಿವೆ ಸರ್ಕಾರ ನಮ್ಮ ಆಶಯವನ್ನು ಈಡೇರಿಸಿಲ್ಲ ಅಧ್ಯಕ್ಷ ಚುನಾವಣಾ ಹಕ್ಕನ್ನು ದಯಪಾಲಿಸಬೇಕೆಂದು ಶ್ರೀಮನ್ಮಹಾರಾಜರಿಗೆ ಮನವಿ ... ಮತ್ತು ಅದರ ಬಗ್ಗೆ ಕಾರ್ಯಕ್ರ... ಳ್ಳಲು ಉಪಾಧ್ಯಕ್ಷರು ಮತ್ತು ಕೌ... ಸದಸ್ಯರನ್ನೊಳಗೊಂಡ ಸವಿಶೇಷ ಸಭೆ ಬೇಕೆಂಬ ದೇ ವಿಷಯ ಹೆಸರು ಸೂಚಿಸಲ್ಪಟ್ಟಿ...

ವೈಟೋಫೆರಿನ್

—o—

ಎ, ಬಿ, ಮತ್ತು ಡಿ ಎಂಬ ಶರೀರ ಪೋಷಕ ವೈಟಮಿನ್‌ಗಳಿಂದಲೂ, ಐರನ್ ಕ್ಯಾಲ್ಸಿಯಂ ಮತ್ತು ಫೊಟಾಸಿಯಂ ಎಂಬ ಲೋಹ ವಿಶೇಷಗಳಿಂದಲೂ ಕೂಡಿ, ಜೇನುತುಪ್ಪ ಮತ್ತು ಮಾಲ್ಟ್ ಸಾರಗಳಿಂದ ಬೆರೆತ ಉತ್ತಮ ವರ್ಗದ ಟಾನೀಕು.

ವೈಟಮಿನ್ನುಗಳ ಅಭಾವತೆಯಿಂದೊದಗುವ ಎಲ್ಲ ಅಸ್ವಸ್ಥತೆಗೂ, ರಕ್ತಹೀನತೆ ದೌರ್ಬಲ್ಯ ಮೊದಲಾದ ದೇಹಾಲಸ್ಯಕ್ಕೂ ಕೊಡಲು ಯೋಗ್ಯವಾದದ್ದು.

——o——

— ಮೈಸೂರಿನಲ್ಲಿ ತಯಾರಾದುದು —

—ಆ—

ಮೈಸೂರು ಇಂಡಸ್ಟ್ರಿಯಲ್ ಅಂಡ್ ಟಿಸ್ಟಿಂಗ್
ಲ್ಯಾಬೋರೇಟರಿ ಲಿಮಿಟೆಡ್

ಮಲ್ಲೇಶ್ವರಂ ಪೋಸ್ಟು .... ಬೆಂಗಳೂರು

At Opera — 2nd Glorious Week

THE SECRET CODE

Next Change — Stagedoor Canteen

Morning Shows from 14—2—47 — JADE MASK

dited, Printed and Published by M. S Krishna Rao at the vavadi Press ChamarajAgra-har, Mysore.

At Ranjit—— 2nd Houseful Week

SHAHJEHAN

ಸೈಗಾಲ್, ಜೈರಾಜ್, ರಾಗಿನಿ, ನಸೀಂ ಪಾತ್ರವಹಿಸಿರುವ

ಷಹಜಹಾನ್

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘ ಪ್ರಿಯವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಗುಣ್ಣುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸು

ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂ ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಸೈಟುಗಳ ಹರಾಜು

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ಮೈಸೂರು ಸಿಟಿ ವಾಣೀವಿಲಾಸ ಮೊಹಲ್ಲಾದಲ್ಲಿ ಗೋಕುಲಂ ರೋಡಿನ ಪಶ್ಚಿಮ ದಿಕ್ಕಿನಲ್ಲಿರುವ ಕಾಟೇಜ್ ಮತ್ತು ಬಂಗ್ಲೋ ಸೈಟುಗಳನ್ನು ತಾ || 12-1-47 ನೇ ಮರ್ಕುಂ ಹರಾಜು ಇಸ್ಮಿಹಾರ್ ನಾಮೆಯ ಪರತ್ಯೂಗಳಿಗೆ ವಳಪಡಿಸಿ ತಾ || 16-2-1947 ನೇ ಭಾನುವಾರ ಬೆಳಿಗ್ಗೆ 9-30 ಘಂಟೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ.

ಇತರ ವಿವರಗಳನ್ನು ಆಫೀಸಿನಲ್ಲಿ ರಜಾದಿನಗಳಲ್ಲದ ಇತರ ದಿವಸಗಳಲ್ಲಿ 11 ಘಂಟೆಯಿಂದ 5 ಘಂಟೆವರೆಗೆ ತಿಳಿಯಬಹುದು.

(Sd) K. Venkatesha Iyer
For Chairman
City Improvement Trust Board, Mysore

ಜೀವನ ಪಥ

ಪ್ರಪಂಚದ ಅನುಜ್ಞೆಯಿಲ್ಲದೆಯೇ ಮನುಷ್ಯನು ಪ್ರಪಂಚದಲ್ಲಿ ಜನಿಸುತ್ತಾನೆ. ಪುನಃ ತನ್ನ ಬಯಕೆಗೆ ವಿರುದ್ಧವಾಗಿಯೇ ಪ್ರಪಂಚವನ್ನು ಬಿಡುತ್ತಾನೆ. ಆತನ ಉದ್ದೇಶಗಳನ್ನು ಪ್ರಪಂಚವು ಸರಿಯಾಗಿ ಗ್ರಹಿಸಲಾರದು. ಬಾಲ್ಯದಲ್ಲಿ ಅವನೊಬ್ಬ ದೇವತೆ. ಯೌವನದಲ್ಲಿ ಅವನೊಬ್ಬ ಮೂರ್ಖ. ಹೆಂಡರು ಮಕ್ಕಳೊಂದಿಗೆ ಸಂಸಾರ ಮಾಡುತ್ತಿರುವನೊಬ್ಬ ಪೊದ್ದ. ಬ್ರಹ್ಮಚಾರಿಯಾಗಿದ್ದರೆ ಗಂಡಸೇ ಅಲ್ಲ. ಕಾಫೀ ಹೋಟಲುಗಳಲ್ಲಿ ಕಾಲಿಟ್ಟರೆ ಕುಡುಕ. ಇಲ್ಲದಿದ್ದಲ್ಲಿ ಲೋಭಿ. ಅವನಿಗೆ ಮೆದಳಿನ ಶಕ್ತಿ ಇದ್ದಲ್ಲಿ ಬುದ್ಧಿವಂತನೇ ಆಗಲಿ ಮೋಸಗಾರ. ಗುಡಿಗೆ ಹೋದರೆ ಅವನು ವೇಷಧಾರಿ ಭಕ್ತ. ಹೋಗದಿದ್ದರೆ ಪಾಪಿ ದಾತನಾದಲ್ಲಿ ಅದು ಪ್ರಚಾರದ ಸಲುವಾಗಿ. ದಾತನಲ್ಲದಿದ್ದಲ್ಲಿ ಅವನು ಪರಮ ಲೋಭಿ. ನೀಚ. ಪ್ರಪಂಚಕ್ಕೆ ಬಂದಾಗ ಅವನನ್ನು ಪ್ರತಿಯೊಬ್ಬನೂ ಮುತ್ತಿಡುತ್ತಾನೆ. ಸಾಯುವುದಕ್ಕೆ ಮುಂಚೆ ಪ್ರತಿಯೊಬ್ಬನೂ ಅವನನ್ನು ಹೊಡೆಯಹೋಗುತ್ತಾನೆ. ಚಿಕ್ಕಂದಿನಲ್ಲಿಯೇ ಸತ್ತು ಹೋದವನಿಗೆ, ಅವನು ಸಾಯದೇ ಇದ್ದಿದ್ದಲ್ಲಿ ಭವಿಷ್ಯವು ಬಹಳ ಶೋಭಾಯಮಾನವಾಗುತ್ತಿತ್ತು. ವೃದ್ಧಾವಸ್ಥೆಯು ಬರುವರೆಗೆ ಜೀವಿಸಿಕೊಂಡಿದ್ದಲ್ಲಿ ಅವನು ಬಹುಶಃ ವೀಲುನಾಮೆಯನ್ನು ಬರೆದೇ ಇಟ್ಟಿರಬಹುದೆಂದೆಂದುಕೊಳ್ಳುತ್ತಾರೆ. .... (ಓಂ)

ಲಾಹೋರ್, ಆ ೧ — ಜಿನ್ನಾರವರು ಖಾಲೀ ನೆಲದ ಮೇಲೆ ಆಗಾಗಮಲಗಿಕೊಳ್ಳುತ್ತಿದ್ದಾರೆ. ಜೈಲುವಾಸದ ಕಷ್ಟಗಳಿಗೆ ತಯಾರಾಗುತ್ತಿರುವಂತಿದೆ. ಇದುವರೆವಿಗೂ ಆತ ಬಂದೀಖಾನೆ ವಾಸವನ್ನು ಅನುಭವಿಸಿಲ್ಲ.

ಲಂಡನ್, ಜು 31— ನವೆಂಬರ್‌ನಲ್ಲಿ ಭಾರತದ ಆಹಾರ ಪರಿಸ್ಥಿತಿ ಅತಿ ಭಯಾನಕವಾಗಿರುವುದೆಂದು ಬ್ರಿಟಿಷ್ ಆಹಾರ ಮಂತ್ರಿ ಮಂಡಳದ ಶ್ವೇತಪತ್ರ ತಿಳಿಸಿದೆ.

ವಿಶ್ವಕರ್ಣಾಟಕ ಪತ್ರಿಕೆ

ಬೆಂಗಳೂರು ಆ 2 — ಭಾರತ ರಕ್ಷಣಾ ಶಾಸನಾನ್ವಯ 'ವಿಶ್ವಕರ್ಣಾಟಕ' ದೈನಿಕವು ಎರಡು ತಿಂಗಳ ಕಾಲ ಪ್ರಕಟಣೆಯಿಂದ ಪ್ರತಿಬಂಧಿಸಲ್ಪಟ್ಟಿದೆ ಜುಲೈ 31 ರಲ್ಲಿ ಪ್ರಕಟವಾದ 'ಅನಾವಶ್ಯಕ ಪತ್ರ' ಮತ್ತು ಆಗಸ್ಟ್ 1 ರಲ್ಲಿ ಪ್ರಕಟವಾದ 'ಮಾಡಿದ್ದುಣ್ಣೋ ಮಹರಾಯ' ಎಂಬ ಅಗ್ರಲೇಖನಗಳೇ ಇದಕ್ಕೆ ಕಾರಣ. 'ಮಾಡಿದ್ದುಣ್ಣೋ ಮಹರಾಯ' ಲೇಖನದ ಪ್ರತಿಗಳು ಭಾರತ ರಕ್ಷಣಾ ಕಾನೂನಿನ ಪ್ರಕಾರ ಮುಟ್ಟುಗೋಲು ಹಾಕಿಕೊಳ್ಳಲ್ಪಟ್ಟಿದೆ.

ಮದರಾಸು, ಆ 2 — ಎಸ್ ಐ [illegible] ಯೂನಿಯರ್ 26 ಕೇಳಿಕೆ [illegible] ಯನ್ನು ಜನರಲ್ ಮೇನೇಜ [illegible]ವರು. ಅದರಂತೆ ಅನ [illegible] ಕೊಡದಿದ್ದರೆ ತಾ|| 15 ರಿಂ [illegible] ಮುಷ್ಕರಿಸಿವರಂತೆ.

ವಿ[illegible]

ಬಿ[illegible] ಇಂಟರ್[illegible] ವರ್ಷಾಡಿ[illegible] ರೂ 11 ಸಾವಿರ ಸರಕಾ[illegible] ವ್ಯಯಿಸಿಗುವುದು.

ಲಂಡನ್ ಜು 31— ಬ್ರಿಟಿಷ್ [illegible] ಲ್ಜರುಗಳು ಪರದೇಶೀ ಹೆಂಗಸರನ್ನು ([illegible] ಪಾನೀ ಸ್ತ್ರೀಯರನ್ನು ಬಿಟ್ಟು) ಮದುವೆಯಾಗಬಹುದೆಂದು ಹೇಳಲಾಗಿದೆ.

ಪೂನಾ ಆ 1 — ಇದುವರೆಗೆ 259 ನಿಮ್ನ ವರ್ಗದ ಸತ್ಯಾಗ್ರಹಿಗಳು ದಸ್ತಗಿರಿಯಾಗಿದ್ದರು. 70 ಮಂದಿ ಕ್ಷಮಾಪಣೆ ಕೇಳಿದೆ ಪ್ರಯುಕ್ತ ಬಿಡುಗಡೆ ಮಾಡಲ್ಪಟ್ಟರು.

ಮೈಸೂರು ಆ 2 — ಮೈಸೂರು ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಶ್ರೀ ಕೆ. ಚಂಗಲರಾಯ ರೆಡ್ಡಿಯವರಿಗೆ ಹೆಚ್ಚು ಓಟುಗಳು ಬಂದು ಅಧ್ಯಕ್ಷ ಪದವಿಗೇರಿದರು.



[illegible]ಾಗುತ್ತಿ[illegible]

ಬಹು ಸುಲಭವಿದೆ. ಆಯುರ್ವೇದ ಪಂಡಿತರೊಬ್ಬರಿಗೆ ತಿಂಗಳಿಗೆ ಮೂವತ್ತು ನಲವತ್ತು ರೂಪ್ಯಾಗಳನ್ನ ಕೊಟ್ಟರಾಯಿತು. ಆ ಊರಿನ ಜನಗಳ ಆರೋಗ್ಯ ರಕ್ಷಣಾ ಕಾರ್ಯವನ್ನೆಲ್ಲಾ ಆತನೇ ವಹಿಸಿಕೊಳ್ಳುತ್ತಾನೆ- ಮೂಲಿಕೆಗಳನ್ನು ತರುವುದು, ಔಷಧಗಳನ್ನು ತಯಾರಿಸುವುದು, ರೋಗಿಗಳನ್ನು ಉಪಚರಿಸುವುದು, ಅವರಿಗೆ ಚಿಕಿತ್ಸೆ ಮಾಡುವುದು, ಇತ್ಯಾದಿ ಎಲ್ಲಾ ಅಧಿಕಾರಗಳೂ ಆತನ ಹಕ್ಕಿನ ದಾಗಿರುತ್ತವೆ. ದಿವಾನಗಿರಿಯಿಂದ ಹಿಡಿದು ಡಾಕ್ಟರ್ ಸಾಹೇಬ್‌ರಿವರಗಿನ ಎಲ್ಲ ಅಧಿಕಾರಗಳೂ ಅವರುಗೇನೇ ಸೇರಿರುತ್ತವೆ. ಇಂಥಾ ಒಂದು ಸರ್ವಾಧಿಕಾರ ಪಟ್ಟವನ್ನೇ ಆ ಪಂಡಿತರಿಗೆ ನಮ್ಮ ಸರಕಾರದವರು ಕೊಟ್ಟಿರುತ್ತಾರೆ.

ಸುಲಭ ಸರಕಾರ ರಚನಾ ವಿಧಾನ ಸೂತ್ರಗಳಲ್ಲಿ ನವ್ಯ ಸಂಕಾರ ಗಾಗಿ ಆಚರಣೆಗೆ ತಂದು ಗಿ ನೆಡೆಸಿಕೊಂಡು ಬಂದು

ಇತರ ಇಲಾಖೆಗಳಲ್ಲಿ ದಂತೆ ಆಚರಣೆಗೆ ತರುವ ನಾಳೆ ನೋಡಿರಿ. ‘ಮ

ಟಿ. ಎ. ಮಧುರಂ

ಟಿ. ಎ. ಮಧುರಮ್ ಸುಕು ಪಿಕ್ಚರ್ಸ್‌ರವರ ‘ದೇವದಾಸಿ’ ಲ್ಲಿ ಅಭಿನಯಿಸುವಳೆಂದು ಪ್ರಕಟವಾಗಿತ್ತಷ್ಟೆ. ‘ಕನ್ನಿಕಾ’ ಲ್ಲಿ ಆಕೆ ಅಭಿನಯಿಸುವುದಿಲ್ಲವೆಂಬ ಗೊತ್ತಾಗಿದೆ. ಟಿ. ಎ. ಮಧುರಂ ಪುನಃ ಚಲಚಿತ್ರಗಳಲ್ಲಿ ಅಭಿನಯಿಸಲು ಕಾರಣವಾದ ವಿಷಯವೆಂದರೆ, ಮದ್ರಾಸು ಹೈಕೋರ್ಟಿನಲ್ಲಾದ ಎ. ಎಸ್. ಕೃಷ್ಣರವರ ಮೇಲಿನ ಖೂನಿ ಮೊಕದ್ದಮೆಯ ತೀರ್ಮಾನದ ಕುರಿತು ಫ್ರೀ ವಿ ಕೌನ್ಸಿಲಿನಲ್ಲಿ ಅಪೀಲಿಗೆ ಸಮ್ಮತಿ ದೊರೆತಿದೆಯಷ್ಟೆ-ಅದಕ್ಕೆ ಬೇಕಾಗುವ ಖರ್ಚಿನ ಹಣ ಸಂಗ್ರಹಿಸುವದ್ದೇ ಮಧುರಮಳು ಚಲಚಿತ್ರ ಸೇವೆಗೆ ಇಳಿದುದಾಗಿದೆ. (ಪ್ರ)

ಬೆಂಗಳೂರು ಜು 29 — ಗಣಿ ಕಂಪೆನಿಯವರಿಗೆ ಮೊದಲು 5 ತಿಂಗಳಿಗೆ 12 ಲಕ್ಷ ರೂ. ಪರಿಹಾರ ಸಮಿತಿ ಕೊಡಲು ತೀರ್ಮಾನಿಸಿದೆ.

ಲಂಡನ್ ಜು 29 — ಬ್ರಿಟನ್ ಮತ್ತು ಫ್ರಾನ್ಸುಗಳಲ್ಲಿ ಜೋಟಾ ನೋ[illegible]ಗಳ ಹಾವಳಿ ವಿಪರೀತವಾಗಿದೆ. ಇ[illegible]ದನ್ನು

ಅತ್ಯಾಚಾರಿಗಳ ಪತ್ತೆಗಾಗಿ

ಜರೂಸೆಲಂ ಜು 30 ಪ್ಯಾಲಿಸ್ಟೈನ ಸರಕಾರದ ಕೇಂದ್ರ ಕಛೇರಿಗಳನ್ನು ಬಾಂಬಿನಿಂದ ಉಡಾಯಿಸಿದ ಪ್ರಕರಣ ಸಂಬಂಧದಲ್ಲಿ, ಟೆಲ್‌ಅವೀವಿನ ಒಂದು ಹೋಟಲಿನಲ್ಲಿ 143 ಮಂದಿ ಯಹೂದ್ಯರು ಬಂಧಿಸಲ್ಪಟ್ಟಿದ್ದಾರೆ. ಈ ಪೈಕಿ 10 ಮಂದಿ ಸ್ತ್ರೀಯರು. ಜರೂಸಲಂನಲ್ಲಿ ನಡೆದ ಈ ಭಾರಿ ಅತ್ಯಾಚಾರಕ್ಕೆ ಸಂಬಂಧಿಸಿದವರೆಲ್ಲರನ್ನೂ ಹಿಡಿದುಹಾಕಲು 16000 ಸೈನಿಕರು ಮುನ್ನುಗ್ಗಿತಾರೆ.

ಮದ್ಯಪಾನ ನಿರೋಧ

ಮದರಾಸು ಜು 31 — ಮದ್ಯಪಾನ ನಿರೋಧವು ಪ್ರಾಂತದಲ್ಲೆಲ್ಲಾ ಜಿಲ್ಲೆಗಳಲ್ಲೂ 3 ವರ್ಷಗಳೊಳಗೆ ಜಾರಿಗೆ ತರಲಾಗುವುದೆಂದು ಶಾಸನ ಸಭೆಯಲ್ಲಿ ಮುಖ್ಯಮಂತ್ರಿಯವರು ಹೇಳಿದರು.

ಇಂಗ್ಲೆಂಡಿನ ಸಂಕಟ

ಕೆನಡಾ ದೇಶವು ಯೂನಿಯನ್ ಜಾಕಿಗೆ ಬದಲಾಗಿ ತನ್ನದೇ ಆದ ಪ್ರತ್ಯೇಕ ಪತಾಕವನ್ನು ಉಪಯೋಗಿಸಲು ಯೋ[illegible]ತ್ತದೆ. ಕೆನಡಾ ಆಹಾರವನ್ನು [illegible]ಹೋದಲ್ಲಿ ಇಂಗ್ಲೆಂಡಿನಲ್ಲಿ [illegible]ಗುವದಿಲ್ಲ. ಆದುದರಿಂದ [illegible]ನಡಾ ವಿಷಯದಲ್ಲಿ ಯಾ [illegible]ಯಲ್ಲಿಯೂ ಆಕ್ಷೇಪಣೆ ಮಾಡಲಾಗದೆ ಇದೆ.

ಅಕ್ಕಿ ರೇಷ್ಠ ಇಳಿತಾಯ

ಮದರಾಸು ಜು 31 — ಅಕ್ಕಿ ರೇಷ್ಠ 8 ಔನ್ಸಿಗೆ ಇಳಿಸಲ್ಪಟ್ಟು ಮಿಕ್ಕ 4 ಔನ್ಸು ಗೋಧಿ ಅಥವಾ ಬೇರೆ ಧಾನ್ಯ ಕೊಡುವ ವಿಷಯವನ್ನು ಅಸೆಂಬ್ಲಿಯಲ್ಲಿ ಮುಖ್ಯ ಮಂತ್ರಿಗಳು ವಿವರಿಸಿದರು.

300 ಮಂದಿ ನೀರಿನ ಪಾಲು

ಇಸ್ತಂಬಾಲ್ ಜು 30 — ಅಂಟೋನಿಯ್ ಡಿಸ್ಟ್ರಿಕ್ಟಿನಲ್ಲಾದ ನೆರಹಾನಳಿಯಿಂದ 300 ಮಂದಿ ಸತ್ತು ಅನೇಕರು ನಿರಾಶ್ರಿತರಾದರು.

ಲಂಡನ್ ಜು 31 — ಪ್ರಿವಿಕೌನ್ಸಿಲ್ಲಿನಲ್ಲಿಯೂ ಬೂವಾಲ್ ಸನ್ಯಾಸಿ ಸಂಬಂಧದ ಮೊಖದ್ದಮೆ ಅವನ ಅನುಕೂಲವಾಗಿ ತೀರ್ಮಾನವಾಯಿತು.

ಪ್ಯಾರಿಸ್ ಜು 30 — ಶಾಂತಿ ಕರಾರಿನಂತೆ ಇಟಲಿ ರಷ್ಯಾಕ್ಕೆ ಯುದ್ಧ ಪರಿಹಾರಕ್ಕಾಗಿ ರೂ 33,30,00000 ಕೊಡತಕ್ಕದ್ದಾಗಿದೆ. ಮಿಕ್ಕ ಷರತ್ತುಗಳ ವಿವರ ನಾಳೆ ಪ್ರಕಟಿಸಲಾಗುತ್ತೆ.

ವಾಷಿಂಗ್‌ಟನ್ ಜು 30 — ನ್ಯಾಯ ವಿಚಾರಣೆಯಿಲ್ಲದೆ ಬಿಳೀ ಜನರೇ ಮುನ್ನುಗ್ಗಿ ತಪ್ಪಿತಸ್ಥರನ್ನು ಹಿಂಸಿಸುವದನ್ನು ಪ್ರತಿಭಟಿಸಲು ನೀಗ್ರೋ ಜನರು ಪ್ರೊ|| ಟ್ರೂಮನ್ನರ ವೈಟ್ ಹೌಸ್ ಮುಂದೆ ಪಿಕೆಟ್ ನಡೆಸಿದರು.